₹ 5 @vishwavaninews epaper.vishwavani.news vishwavani.news ಬೆಂಗಳೂರು । ಹುಬ್ಬಳ್ಳಿ । ಮಂಗಳೂರು । ದಾವಣಗೆರೆ । ಕಲಬುರಗಿ । ಬೆಳಗಾವಿ ಗುರುವಾರ 14.01.2021 ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್

# ವಿಶ್ವವಾಣಿ
ವಿಶ್ವಾಸವೇ ವಿಶ್ವ





ಕೃಷಿ ಕಾಯಿದೆಗಳನ್ನು ಸುಪ್ರೀಂಕೋರ್ಟ್ ತಡೆ ಹಿಡಿದಿರುವುದು ಒಳ್ಳೆಯದು.

ವಿವರಪುಟ → 11

ಗೋಮಾಂಸ ತಿನ್ನಬೇಕು ಅನ್ನಿಸಿದರೆ ತಿಂತೇನಿ

ವಿವರಪುಟ → 9



ಸಂ.ಪುಟ 6

# ಸಂಪುಟಕ್ಕೆ ಏಳು; ಭಿನ್ನಮತ ಭುಗಿಲು

## ಉಮೇಶ್ ಕತ್ತಿ, ಅರವಿಂದ ಲಿಂಬಾವಳಿ, ಮುರುಗೇಶ್ ನಿರಾಣಿ, ಎಂಟಿಬಿ ನಾಗರಾಜ್, ಯೋಗೇಶ್ವರ್, ಶಂಕರ್, ಅಂಗಾರ ಸಚಿವರಾಗಿ ಪ್ರಮಾಣವಚನ । ಬಿಎಸ್‌ವೈ ಕ್ಯಾಬಿನೆಟ್ ಹೌಸ್‌ಫುಲ್ । ನಾಗೇಶ್‌ಗೆ ನಿಗಮ ಸಮಾಧಾನ । ರೇಣು ಕಣ್ಣೀರು, ರೊಚ್ಚಿಗೆದ್ದ ಯತ್ನಾಳ್

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಬಹು ನಿರೀಕ್ಷಿತ ಸಂಪುಟ ವಿಸ್ತರಣೆ ಪೂರ್ಣಗೊಂಡಿದ್ದು, ಬುಧವಾರ ಮಧ್ಯಾಹ್ನ 3.45ರ ಬಳಿಕ ಏಳು ನೂತನ ಸಚಿವರಿಗೆ ರಾಜ್ಯಪಾಲ ವಿ.ಆರ್.ವಾಲಾ ಅವರು ಪ್ರಮಾಣ ವಚನ ಬೋಧಿಸಿದರು.

ಬುಧವಾರ ಬೆಳಗ್ಗೆ 11 ಗಂಟೆ ವೇಳೆಗೆ ಸ್ವತಃ ಮುಖ್ಯಮಂತ್ರಿ ಯಡಿಯೂರಪ್ಪ ಅವರು ನೂತನ ಸಚಿವರ ಹೆಸರನ್ನು ಬಹಿರಂಗಗೊಳಿಸಿದ್ದರಿಂದ ಬಿಜೆಪಿಯಲ್ಲಿ ಭಿನ್ನಮತ ಶುರುವಾಗಿದೆ. ಮುನಿರತ್ನ ಅವರನ್ನು ಸಂಪುಟಕ್ಕೆ ಸೇರಿಸಿಕೊಳ್ಳದೇ ಮುಖ್ಯಮಂತ್ರಿ ಯಡಿಯೂರಪ್ಪ ಅವರು ಅಚ್ಚರಿ ಮೂಡಿಸಿದ್ದಾರೆ.

ಪ್ರಮಾಣ ವಚನ ಕಾರ್ಯಕ್ರಮಕ್ಕೆ ಕೇಂದ್ರ ಬಿಜೆಪಿ ಪರವಾಗಿ ರಾಜ್ಯ ಬಿಜೆಪಿ ಉಸ್ತುವಾರಿ ಅರುಣ್ ಸಿಂಗ್ ಭಾಗವಹಿಸಿದ್ದರು. ಬುಧವಾರ ಬೆಳಗ್ಗೆ ಬೆಂಗಳೂರಿಗೆ ಆಗಮಿಸಿದ ಬಳಿಕ ಮುಖ್ಯಮಂತ್ರಿ ಯಡಿಯೂರಪ್ಪ ಜತೆ ಮತ್ತೊಂದು ಸುತ್ತಿನ ಮಾತುಕತೆ ನಡೆಸಿದರು. ಅರುಣ್ ಸಿಂಗ್ ಜತೆ ಚರ್ಚಿಸಿದ ಬಳಿಕವೇ ಯಡಿಯೂರಪ್ಪ ಅವರು ತಮ್ಮ ಸಂಪುಟಕ್ಕೆ ಸೇರಲಿರುವ ನೂತನ ಸಚಿವರ ಹೆಸರನ್ನು ಅಧಿಕೃತಗೊಳಿಸಿದರು.

**ಹೆಚ್ಚು ಜನ ಸೇರದಂತೆ ಕ್ರಮ:** ಕರೋನಾ ಆತಂಕ ಇರುವುದರಿಂದ ಈ ಬಾರಿ ಕೇವಲ ನೂರು ಜನರಿಗೆ ಮಾತ್ರ ಅವಕಾಶ ನೀಡಲಾಗಿತ್ತು. ಆದ್ದರಿಂದ ಸಚಿವರಾಗುವ ಕುಟುಂಬ ಸದಸ್ಯರಿಗೆ, ಅಧಿಕಾರಿಗಳಿಗೆ ಹಾಗೂ ನಿಗದಿತ ಸಂಖ್ಯೆಯ ಪತ್ರಕರ್ತರಿಗೆ ಮಾತ್ರ ಅವಕಾಶ ನೀಡಲಾಗಿತ್ತು. ಪ್ರತಿ ಬಾರಿಗಿಂತ ಈ ಬಾರಿ ಪ್ರಮಾಣ ವಚನ ಕಾರ್ಯಕ್ರಮಕ್ಕೆ ಕಡಿಮೆ ಸಂಖ್ಯೆಯಲ್ಲಿ ಜನ ಸೇರಿದ್ದರು. ಮಧ್ಯಾಹ್ನ 3.45ಕ್ಕೆ ಸಂಪುಟ ವಿಸ್ತರಣೆಯಾದ ಬಳಿಕ ಸಂಜೆ ಆರು ಗಂಟೆ ವೇಳೆಗೆ ಏಳು ಸಚಿವರ ಕೊಠಡಿಯನ್ನು ಹಂಚಿಕೆ ಮಾಡಲಾಗಿತ್ತು. ಏಳು ಜನರಿಗೂ ವಿಧಾನಸೌಧದಲ್ಲಿಯೇ ಕೊಠಡಿ ಹಂಚಿಕೆಯಾಗಿದೆ.

**ರಾತ್ರಿಯಿಡೀ ಕಾದಿದ್ದಕ್ಕೆ ಪ್ರತಿಫಲವಿಲ್ಲ:** ಮಂಗಳವಾರ ಸಂಜೆಯೇ ಮುನಿರತ್ನ ಅವರ ಹೆಸರು ಸಂಪುಟದ ಪಟ್ಟಿಯಿಂದ ಬಿಟ್ಟು ಹೋಗಿರುವ ಬಗ್ಗೆ ಮುನಿರತ್ನ ಅವರಿಗೆ ಮಾಹಿತಿ ಲಭಿಸಿದೆ. ಕೂಡಲೇ ಯಡಿಯೂರಪ್ಪ ಅವರ ನಿವಾಸಕ್ಕೆ ದೌಡಾಯಿಸಿದ ಮುನಿರತ್ನ ಅವರು, ಇಡೀ ರಾತ್ರಿ ಸಂಪುಟದ ಪಟ್ಟಿಯಲ್ಲಿ ತಮ್ಮ ಹೆಸರನ್ನು ಸೇರಿಸಲು ಹೋರಾಡಿದ್ದಾರೆ. ಆದರೆ ಮುಖ್ಯಮಂತ್ರಿ ಯಡಿಯೂರಪ್ಪ ಅವರು 'ಎಲ್ಲವೂ ವರಿಷ್ಠರ ತೀರ್ಮಾನ'ವೆಂದು ಹಿಂದೆ ಸರಿದರು. ಈ ವೇಳೆ ಅರುಣ್ ಸಿಂಗ್ ಅವರ ಬಳಿ ಈ ಬಗ್ಗೆ ಮನವಿ ಮಾಡಲಾಯಿತು. ಆದರೆ 'ಮುಂದಿನ ದಿನಗಳಲ್ಲಿ ಈ ಬಗ್ಗೆ ತೀರ್ಮಾನಿಸೋಣ' ಎನ್ನುವ ಮೂಲಕ ಮುನಿರತ್ನ ಅವರಿಗೆ ನಿರಾಸೆ ಉಂಟು ಮಾಡಿದ್ದಾರೆ ಎನ್ನಲಾಗಿದೆ.



ನೂತನ ಸಚಿವರೊಂದಿಗೆ ರಾಜ್ಯಪಾಲ ವಿ.ಆರ್.ವಾಲಾ ಮತ್ತು ಮುಖ್ಯಮಂತ್ರಿ ಯಡಿಯೂರಪ್ಪ.

## ನೂತನ ಸಚಿವರ ಪರಿಚಯ, ಸಂಭಾವ್ಯ ಖಾತೆ

### ಅರವಿಂದ ಲಿಂಬಾವಳಿ
ಕ್ಷೇತ್ರ: ಮಹದೇವಪುರ
ಕೊಠಡಿ ಸಂಖ್ಯೆ: ವಿಧಾನಸಭೆ 344, 344 ಎ
ಸಂಭಾವ್ಯ ಸಚಿವ ಸ್ಥಾನ: ಗೃಹ ಖಾತೆ
- ಸತತ ಎಂಟು ಬಾರಿ ರಾಜ್ಯ ಸಂಘಟನಾ ಕಾರ್ಯದರ್ಶಿಯಾಗಿ ನಿರ್ವಹಣೆ
- ನಾಲ್ಕು ಬಾರಿ ಮಹದೇವಪುರ ಕ್ಷೇತ್ರದಿಂದ ವಿಧಾನಸಭೆ ಪ್ರವೇಶ
- ಆರ್‌ಎಸ್‌ಎಸ್ ಹಾಗೂ ಪಕ್ಷದ ವರಿಷ್ಠರಿಗೆ ನಿಷ್ಠಾವಂತ.

### ಎಸ್.ಅಂಗಾರ
ಕ್ಷೇತ್ರ: ಸುಳ್ಯ
ಕೊಠಡಿ ಸಂಖ್ಯೆ : ವಿಧಾನಸಭೆ 252, 253 ಎ
ಸಂಭಾವ್ಯ ಸಚಿವ ಸ್ಥಾನ: ಕನ್ನಡ ಮತ್ತು ಸಂಸ್ಕೃತಿ ಇಲಾಖೆ
- 6 ಬಾರಿ ಸುಳ್ಯದಿಂದ ಶಾಸಕರಾಗಿ ಆಯ್ಕೆ
- ಆರ್‌ಎಸ್‌ಎಸ್ ಹಾಗೂ ಪಕ್ಷದ ನಿಷ್ಠಾವಂತ ಕಾರ್ಯಕರ್ತ
- ಕರಾವಳಿ ಭಾಗದ ದಲಿತ ನಾಯಕನಿಗೆ ಸ್ಥಾನ ಕೊಟ್ಟರೆ ಪಕ್ಷಕ್ಕೆ ಪ್ಲಸ್

### ಉಮೇಶ್ ಕತ್ತಿ
ಕ್ಷೇತ್ರ: ಹುಕ್ಕೇರಿ
ಕೊಠಡಿ ಸಂಖ್ಯೆ: ವಿಧಾನಸಭೆ 329, 329 ಎ
ಸಂಭಾವ್ಯ ಸಚಿವ ಸ್ಥಾನ: ತೋಟಗಾರಿಕೆ
- ಎಂಟು ಬಾರಿ ಶಾಸಕರಾಗಿ ಆಯ್ಕೆ
- ಸಚಿವ ಸ್ಥಾನಕ್ಕಾಗಿ ಬಂಡಾಯ ಸಾರಿದ್ದ ನಾಯಕ
- ಬಿಜೆಪಿಗೆ ಬಂದ ಬಳಿಕ ಯಡಿಯೂರಪ್ಪ ಅವರೊಂದಿಗೆ ಉತ್ತಮ ಒಡನಾಟ

### ಮುರುಗೇಶ್ ನಿರಾಣಿ
ಕ್ಷೇತ್ರ: ಬೀಳಗಿ
ಕೊಠಡಿ ಸಂಖ್ಯೆ: ವಿಧಾನಸಭೆ 307, 307 ಎ
ಸಂಭಾವ್ಯ ಸಚಿವ ಸ್ಥಾನ: ಇಂಧನ
- ಮೊದಲಿನಿಂದಲೂ ಬಿಎಸ್‌ವೈ ಅವರ ಆಪ್ತ
- ಕೆಲ ದಿನಗಳ ಹಿಂದೆ ಸಚಿವ ಸ್ಥಾನ ಸಿಕ್ಕಿಲ್ಲವೆಂದು ಅಪಸ್ವರ
- ನಿರಾಣಿ ಅವರಿಗೆ ಸ್ಥಾನ ನೀಡುವ ಮೂಲಕ, ಯತ್ನಾಳ್ ಧ್ವನಿ ಅಡಗಿಸುವ ಪ್ರಯತ್ನ

### ಎಂಟಿಬಿ ನಾಗರಾಜ್
ಕ್ಷೇತ್ರ: ವಿಧಾನ ಪರಿಷತ್ ಸದಸ್ಯ
ಕೊಠಡಿ ಸಂಖ್ಯೆ: ವಿಧಾನಸಭೆ 330, 330 ಎ
ಸಂಭಾವ್ಯ ಸಚಿವ ಸ್ಥಾನ: ಹಿಂದುಳಿದ ವರ್ಗಗಳ ಕಲ್ಯಾಣ ಖಾತೆ
- ಮೈತ್ರಿ ಸರಕಾರದಲ್ಲಿ ಸಚಿವ ಸ್ಥಾನ ನೀಡಲಿಲ್ಲವೆಂದು ಬಿಜೆಪಿಯತ್ತ ಮುಖ
- ಬರುವಾಗಲೇ ಸಚಿವ ಸ್ಥಾನಕ್ಕೆ ಬೇಡಿಕೆಯಿಟ್ಟಿದ್ದ ನಾಯಕ
- ಹೊಸಕೋಟೆಯಲ್ಲಿ ಸೋತರೂ ಬಿಎಸ್‌ವೈ ಕೊಟ್ಟ ಮಾತು ಉಳಿಸಿಕೊಳ್ಳಲು ಸಚಿವ ಸ್ಥಾನ

### ಆರ್.ಶಂಕರ್
ಕ್ಷೇತ್ರ: ವಿಧಾನ ಪರಿಷತ್ ಸದಸ್ಯ
ಕೊಠಡಿ ಸಂಖ್ಯೆ: ವಿಧಾನಸಭೆ 305, 305 ಎ
ಸಂಭಾವ್ಯ ಸಚಿವ ಸ್ಥಾನ: ಅಬಕಾರಿ
- ಜೆಡಿಎಸ್-ಕಾಂಗ್ರೆಸ್ ಸರಕಾರ ಪತನಕ್ಕೆ ಪ್ರಮುಖ ಪಾತ್ರ
- ಬಿಜೆಪಿ ಸೇರುವಾಗಲೇ ಸಚಿವ ಸ್ಥಾನಕ್ಕೆ ಆಫರ್
- ಬಿಎಸ್‌ವೈ ಕೊಟ್ಟ ಮಾತು ಉಳಿಸಿಕೊಳ್ಳಲು ಸ್ಥಾನ ನೀಡಿಕೆ

### ಸಿ.ಪಿ.ಯೋಗೇಶ್ವರ್
ಕ್ಷೇತ್ರ: ವಿಧಾನ ಪರಿಷತ್ ಸದಸ್ಯ
ಕೊಠಡಿ ಸಂಖ್ಯೆ: ವಿಧಾನಸಭೆ 336, 336 ಎ
ಸಂಭಾವ್ಯ ಸಚಿವ ಸ್ಥಾನ: ಪ್ರವಾಸೋದ್ಯಮ, ರೇಷ್ಮೆ ಖಾತೆ, ಯುವಜನ ಮತ್ತು ಕ್ರೀಡೆ
- ಆಪರೇಷನ್ ಕಮಲದ ರೂವಾರಿ
- ಸಿಎಂಗೆ ಇಷ್ಟವಿಲ್ಲದಿದ್ದರೂ, ವರಿಷ್ಠರಿಂದ ವೈಲ್ಡ್ ಕಾರ್ಡ್ ಎಂಟ್ರಿ
- ಹಳೇ ಮೈಸೂರು ಭಾಗದಲ್ಲಿ ಪಕ್ಷ ಸಂಘಟನೆಗೆ ಸಿದ್ಧತೆ

## ನಾಗೇಶ್‌ಗೆ ಕೋಟಿ ಕೇಸ್‌ನ ಕೋಟಲೆ

ನಿರೀಕ್ಷೆಯಂತೆ ಅಬಕಾರಿ ಸಚಿವ ನಾಗೇಶ್ ಅವರನ್ನು ಸಂಪುಟದಿಂದ ಕೈಬಿಡಲಾಗಿದೆ. ಬುಧವಾರ ನಡೆದ ಸಭೆಯಲ್ಲಿ ಯಡಿಯೂರಪ್ಪ ಅವರು ಈ ವಿಷಯವನ್ನು ನಾಗೇಶ್ ಅವರಿಗೆ ಹೇಳಿದರು. ಸಂಪುಟದಿಂದ ಕೈಬಿಡದಂತೆ ಸಭೆಯಲ್ಲಿ ಹಾಗೂ ಅದಕ್ಕೂ ಮೊದಲು ಸಿಎಂ ನಿವಾಸದಲ್ಲಿ ಮನವಿ ಮಾಡಿದರೂ, ವರಿಷ್ಠರ ಸೂಚನೆ ಇರುವುದರಿಂದ ಏನೂ ಮಾಡಲು ಸಾಧ್ಯವಿಲ್ಲ ಎಂದು ಯಡಿಯೂರಪ್ಪ ಅವರು ಹೇಳಿದ್ದಾರೆ. ಸಚಿವ ಸ್ಥಾನದಿಂದ ಕೆಳಗಿಳಿಸಿದ ಬಳಿಕ ನಾಗೇಶ್ ಅವರಿಗೆ ಸಂಪುಟ ದರ್ಜೆಯ ಸ್ಥಾನಮಾನದೊಂದಿಗೆ, ಅಂಬೇಡ್ಕರ್ ಅಭಿವೃದ್ಧಿ ನಿಗಮದ ಅಧ್ಯಕ್ಷ ಸ್ಥಾನ ನೀಡಲಾಗಿದೆ.

ಇನ್ನಷ್ಟು ಸುದ್ದಿಗಳು ಪುಟ-4

## ಅತೃಪ್ತ ಶಾಸಕರ ತಕರಾರು ಶುರು

**ಬೆಂಗಳೂರು:** ಒಂದೆಡೆ ಮುಖ್ಯಮಂತ್ರಿ ಯಡಿಯೂರಪ್ಪ ಅವರು ತಮ್ಮ ಸಚಿವ ಸಂಪುಟಕ್ಕೆ ಸೇರುವ ಹೆಸರುಗಳನ್ನು ಘೋಷಿಸುತ್ತಿದ್ದಂತೆ, ಇನ್ನೊಂದೆಡೆ ಬಿಜೆಪಿಯಲ್ಲಿ ಭಿನ್ನಮತ ಭುಗಿಲೆದ್ದಿದೆ. ಶಾಸಕರಾದ ತಿಪ್ಪಾರೆಡ್ಡಿ, ಎಂ.ಪಿ.ರೇಣುಕಾಚಾರ್ಯ, ಮೂಡಿಗೆರೆ ಎಂ.ಪಿ. ಕುಮಾರಸ್ವಾಮಿ, ಶಿವನಗೌಡ ನಾಯಕ್, ನೆಹರು ಓಲೇಕಾರ್, ಸತೀಶ್ ರೆಡ್ಡಿ, ಅರವಿಂದ ಬೆಲ್ಲದ್ ಸೇರಿದಂತೆ ಅನೇಕ ಶಾಸಕರು ತಮ್ಮ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

**ರೇಣುಕಾ ಕಣ್ಣೀರು; ಸತೀಶ್ ಟ್ವೀಟ್ ವಾರ್:** ಸಂಪುಟದಲ್ಲಿ ಸ್ಥಾನ ಸಿಗುವುದಿಲ್ಲ ಎಂಬುದು ತಿಳಿಯುತ್ತಿದ್ದಂತೆ ಶಾಸಕ ಎಂ.ಪಿ. ರೇಣುಕಾಚಾರ್ಯ ಅವರು ಯಡಿಯೂರಪ್ಪ ಅವರ ಮುಂದೆ ಕಣ್ಣೀರು ಹಾಕಿದ್ದರೆ, ಬೊಮ್ಮನಹಳ್ಳಿ ಶಾಸಕ ಸತೀಶ್ ರೆಡ್ಡಿ, ಯಡಿಯೂರಪ್ಪ ವಿರುದ್ಧ ಟ್ವೀಟ್ ವಾರ್ ಮಾಡಿದ್ದಾರೆ. ಯಡಿಯೂರಪ್ಪನವರ ಸಂಪುಟದಲ್ಲಿ ಸಚಿವರಾಗಲು ಇರುವ ಅರ್ಹತೆಗಳೇನು? ಅನಂತಕುಮಾರ್ ಇದಿದ್ದರೆ ಈ ರೀತಿಯಾಗುತ್ತಿರಲಿಲ್ಲ ಎಂದು ಸತೀಶ್ ರೆಡ್ಡಿ ಟ್ವೀಟ್ ಮಾಡಿದ್ದಾರೆ.

> ಹಣ ಮತ್ತು ಬ್ಲ್ಯಾಕ್‌ಮೇಲ್‌ಗೆ ಮಣಿದು ಮುಖ್ಯಮಂತ್ರಿ ಯಡಿಯೂರಪ್ಪ ಮೂವರಿಗೆ ಸಚಿವ ಸ್ಥಾನ ನೀಡಿದ್ದು, ಇವರ ನಾಯಕತ್ವದ ಅಂತ್ಯ ಆರಂಭವಾಗಿದೆ.
> -**ಬಸನಗೌಡ ಪಾಟೀಲ್ ಯತ್ನಾಳ್** ಶಾಸಕ

> ಯಡಿಯೂರಪ್ಪ ಅವರು ಈ ಹಿಂದೆ ನಮ್ಮ ತಂದೆ ಅವರಿಗೆ ಸಚಿವ ಸ್ಥಾನ ನೀಡುವುದಾಗಿ ಮಾತು ಕೊಟ್ಟಿದ್ದರು. ಆದರೆ ಈಡೇರಿಸಲಿಲ್ಲ. ಈಗ ನನಗೂ ಅವಕಾಶ ಕಲ್ಪಿಸಿಲ್ಲ. ಇದರಿಂದ ಅತೀವ ಬೇಸರವಾಗಿದೆ. ನೇರವಾಗಿ ಆಯ್ಕೆಯಾದ ಶಾಸಕರಿಗೆ ಸಚಿವ ಸ್ಥಾನ ನೀಡುವುದನ್ನು ಬಿಟ್ಟು ವಿಧಾನ ಪರಿಷತ್ ಸದಸ್ಯರಿಗೆ ಸಚಿವ ಸ್ಥಾನ ನೀಡಿದ ಔಚಿತ್ಯವೇನು?
> - **ಅರವಿಂದ ಬೆಲ್ಲದ** ಶಾಸಕ

> ಈ ಬಾರಿ ಸಂಪುಟದಲ್ಲಿ ಅವಕಾಶ ಸಿಗಬಹುದೆಂಬ ನಿರೀಕ್ಷೆ ಇಟ್ಟುಕೊಂಡಿದ್ದೆ. ಆದರೆ ಪಟ್ಟಿಯಲ್ಲಿ ನನ್ನ ಹೆಸರು ಇಲ್ಲದಿರುವುದು ನೋವು ತಂದಿದೆ. ಅತಿಯಾದ ನಿಷ್ಠೆ ನನಗೆ ಮುಳುವಾಯಿತು. ನನಗೆ ಬೇರೆಯವರ ರೀತಿ ಮಂತ್ರಿ ಸ್ಥಾನಕ್ಕಾಗಿ ಲಾಬಿ ಮಾಡುವುದಕ್ಕೆ ಬರುವುದಿಲ್ಲ. ನೇರ, ನಿಷ್ಠುರ ಮಾತು ನನಗೆ ಮುಳುವಾಯಿತು.
> -**ರೇಣುಕಾಚಾರ್ಯ** ಸಿಎಂ ರಾಜಕೀಯ ಕಾರ್ಯದರ್ಶಿ

### ಇಂಧನ ಸಚಿವ ನಾನೇ ಎಂದು ಸಭೆ ನಡೆಸಿದ್ದ ಆರೋಪಕ್ಕೆ ಮುನಿರತ್ನ ಬಲಿ । ಆ ಮುನಿಸೇ ಕಾರಣವೇ ?

# ರತ್ನನ ಪ್ರಯತ್ನ ಮುನಿಸಿನಲ್ಲಿ ಕೊನೆ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು



ಬಿಜೆಪಿ ಸರಕಾರ ರಚನೆಯಲ್ಲಿ ಪ್ರಮುಖ ಪಾತ್ರ ವಹಿಸಿದ್ದ ನಾಯಕರ ಪೈಕಿ ಮುನಿರತ್ನ ಕೂಡ ಒಬ್ಬರು. ಗೆದ್ದ ಕೂಡಲೇ ಸಚಿವರಾಗುವ ಕನಸು ಕಾಣುತ್ತಿದ್ದವರಿಗೆ ಇದೀಗ ಪಕ್ಷದ ವರಿಷ್ಠರು ಶಾಕ್ ನೀಡಿದ್ದಾರೆ.

ರಾಜ್ಯದಲ್ಲಿ ಸಂಪುಟ ವಿಸ್ತರಣೆಯ ಮಾತು ಕೇಳಿಬಂದಾಗ ಮುನಿರತ್ನ ಅವರಿಗೆ ಸಚಿವ ಸ್ಥಾನ ಖಚಿತ ಎಂದೇ ಹೇಳಲಾಗಿತ್ತು. ಮುನಿರತ್ನ ಅವರಿಗಾಗಿಯೇ ಒಂದು ಸ್ಥಾನವನ್ನು ಮೀಸಲಿಟ್ಟಿದ್ದರು. ಮಂಗಳವಾರ ಸಂಜೆವರೆಗೂ ಮುನಿರತ್ನ ಅವರಿಗೆ ಸ್ಥಾನ ಖಚಿತ ಎನ್ನಲಾಗಿತ್ತು. ಆದರೆ ಸಂಜೆ ಎಂಟು ಗಂಟೆ ಬಳಿಕ ಬದಲಾದ ರಾಜಕೀಯ ಪರಿಸ್ಥಿತಿಯಲ್ಲಿ ಮುನಿರತ್ನ ಅವರನ್ನು ಸಂಪುಟದಿಂದ ಕೈಬಿಡುವಂತೆ ವರಿಷ್ಠರಿಂದ ಸೂಚನೆ ಬಂದಿದೆ. ಆದ್ದರಿಂದ ಅವರನ್ನು ಕೈಬಿಡಲಾಗಿದೆ ಎಂದು ಹೇಳಲಾಗಿದೆ. ಪ್ರಮುಖವಾಗಿ ಬೆಂಗಳೂರು ಕೋಟಾದಲ್ಲಿ ಈಗಾಗಲೇ ಏಳು ಸಚಿವರಿದ್ದು, ಅರವಿಂದ ಲಿಂಬಾವಳಿ ಹಾಗೂ ಮುನಿರತ್ನ ಅವರಿಗೆ ನೀಡಿದರೆ ಈ ಸಂಖ್ಯೆ 9ಕ್ಕೆ ಏರಲಿದೆ. ಇದರಿಂದ ಮಧ್ಯ ಕರ್ನಾಟಕ ಹಾಗೂ ಕರಾವಳಿ ಭಾಗದಲ್ಲಿ ಭಿನ್ನಮತ ಭುಗಿಲೇಳುವ ಸಾಧ್ಯತೆಯಿದೆ ಎನ್ನುವ ಕಾರಣಕ್ಕೆ ಮುನಿರತ್ನ ಅವರನ್ನು ಕೈಬಿಡಲಾಗಿದೆ. ಇದರೊಂದಿಗೆ ಸಚಿವರಾಗಿ ಅಧಿಕಾರ ಸ್ವೀಕರಿಸುವ ಮೊದಲೇ, ಅಧಿಕಾರಿಗಳೊಂದಿಗೆ ಸಭೆ ನಡೆಸಿರುವುದು ಸ್ಥಾನ ಕೈತಪ್ಪುವುದಕ್ಕೆ ಪ್ರಮುಖ ಕಾರಣ ಎನ್ನಲಾಗಿದೆ.

**ಹಲವು ಬಾರಿ ಮನವಿ ಮಾಡಿದರೂ ಪ್ರಯೋಜನವಿಲ್ಲ:** ಮಂಗಳವಾರ ಸಂಜೆಯೇ ಮುನಿರತ್ನ ಅವರ ಹೆಸರು ಸಂಪುಟದ ಪಟ್ಟಿಯಿಂದ ಬಿಟ್ಟು ಹೋಗಿರುವ ಬಗ್ಗೆ ಮುನಿರತ್ನ ಅವರಿಗೆ ಮಾಹಿತಿ ಲಭಿಸಿದೆ. ಕೂಡಲೇ ಯಡಿಯೂರಪ್ಪ ಅವರ ನಿವಾಸಕ್ಕೆ ದೌಡಾಯಿಸಿದ ಮುನಿರತ್ನ ಇಡೀ ರಾತ್ರಿ ಸಂಪುಟದ ಪಟ್ಟಿಯಲ್ಲಿ ತಮ್ಮ ಹೆಸರನ್ನು ಸೇರಿಸಲು ಹೋರಾಡಿದ್ದಾರೆ. ಆದರೆ ಮುಖ್ಯಮಂತ್ರಿ ಯಡಿಯೂರಪ್ಪ ಅವರು 'ಎಲ್ಲವೂ ವರಿಷ್ಠರ ತೀರ್ಮಾನ'ವೆಂದು ಹಿಂದೆ ಸರಿದರು. ಈ ವೇಳೆ ಅರುಣ್ ಸಿಂಗ್ ಅವರ ಬಳಿ ಮನವಿ ಮಾಡಲಾಯಿತು. ಆದರೆ ಮುಂದೆ ಈ ಬಗ್ಗೆ ತೀರ್ಮಾನಿಸೋಣ ಎಂದು ಮುನಿರತ್ನಗೆ ನಿರಾಸೆ ಮಾಡಿದ್ದಾರೆ.

### ಮೌನವಾಗಿರಲು ನಿರ್ಧಾರ

ಸಚಿವ ಸ್ಥಾನ ಸಿಗದಿರುವ ಬಗ್ಗೆ ಈಗಾಗಲೇ ಅನೇಕ ಆಕಾಂಕ್ಷಿಗಳು ಬಹಿರಂಗ ಹೇಳಿಕೆಗಳನ್ನೇ ನೀಡಿದ್ದಾರೆ. ಆದರೆ ಮುನಿರತ್ನ ಅವರಾಗಲಿ, ಅವರ ಬೆಂಬಲಿಗ ರಾಗಲಿ ಈ ವಿಚಾರವಾಗಿ ಯಾವುದೇ ಹೇಳಿಕೆ ನೀಡಿಲ್ಲ. ಜೆಡಿಎಸ್-ಕಾಂಗ್ರೆಸ್‌ನಿಂದ ಬಿಜೆಪಿಗೆ ಬಂದ ಶಾಸಕರ ಪೈಕಿ ವಿಶ್ವನಾಥ್ ಹಾಗೂ ಮುನಿರತ್ನ ಅವರಿಗೆ ಮಾತ್ರ ನ್ಯಾಯವಾಗಿರುವುದು. ವಿಶ್ವನಾಥ್ ಅವರ ರಾಜಕೀಯ ಜೀವನ ಈಗಾಗಲೇ ಸಂಧ್ಯಾ ಕಾಲದಲ್ಲಿರುವುದರಿಂದ ಬಹಿರಂಗ ಹೇಳಿಕೆ ನೀಡುವು ದರಿಂದ ಯಾವುದೇ ಸಮಸ್ಯೆಯಿಲ್ಲ. ಆದರೆ ಮುನಿ ರತ್ನ ಅವರ ಪರಿಸ್ಥಿತಿ ಹೀಗಿಲ್ಲ. ಆದ್ದರಿಂದ ಬಹಿರಂಗ ಹೇಳಿಕೆ ನೀಡುವ ಬದಲು ಕಾದು ನೋಡುವ ತಂತ್ರ ಅನುಸರಿಸಲು ನಿರ್ಧರಿಸಿದ್ದಾರೆ ಎನ್ನಲಾಗಿದೆ.

### ಮಾತು ಮುರಿದ ಯಡಿಯೂರಪ್ಪ

ಮುನಿರತ್ನ ಅವರು ರಾಜರಾಜೇಶ್ವರಿ ನಗರ ಉಪಚುನಾವಣೆಗೆ ಸ್ಪರ್ಧಿಸಿದಾಗ, ಮುನಿರತ್ನ ಪರ ಪ್ರಚಾರಕ್ಕೆ ಆಗಮಿಸಿದ್ದ ಯಡಿಯೂರಪ್ಪ ಅವರು 'ನೀವು ಶಾಸಕ ಸ್ಥಾನದ ಅಭ್ಯರ್ಥಿಗಲ್ಲ. ಸಚಿವ ಸ್ಥಾನದ ಅಭ್ಯರ್ಥಿಗೆ ಮತ ಹಾಕುತ್ತಿರುವಿರಿ' ಎಂದು ಹೇಳಿಕೆ ನೀಡಿದ್ದರು. ಇದರಿಂದ ತಮಗೆ ಸಚಿವ ಸ್ಥಾನ ಸಿಗುವ ವಿಶ್ವಾಸದಲ್ಲಿ ಅಧಿಕಾರಿಗಳೊಂದಿಗೆ ಸಭೆ ನಡೆಸಿದ್ದರು ಎನ್ನುವ ಆರೋಪ ಕೇಳಿಬಂದಿದೆ. ಅದರಲ್ಲಿಯೂ ಇಂಧನ ಇಲಾಖೆಯೇ ತಮಗೆ ಸಿಗಲಿದೆ ಎನ್ನುವ ಉತ್ಸಾಹದಲ್ಲಿ ಇಲಾಖೆ ಅಧಿಕಾರಿಗಳೊಂದಿಗೆ ಸಭೆ ನಡೆಸಿರುವುದು ಮುಖ್ಯಮಂತ್ರಿ ಹಾಗೂ ಪಕ್ಷದ ವರಿಷ್ಠರ ಕೆಂಗಣ್ಣಿಗೆ ಗುರಿಯಾಗಿದೆ.

## 12 ಜಿಲ್ಲೆಗಳಿಗಿಲ್ಲ ಪ್ರಾತಿನಿಧ್ಯ

ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪನವರ ಸಂಪುಟ ಬಹುತೇಕ ಭರ್ತಿಯಾಗಿದೆ. ಆದರೂ ರಾಜ್ಯದ 12 ಜಿಲ್ಲೆಗಳಿಗೆ ಕ್ಯಾಬಿನೆಟ್‌ನಲ್ಲಿ ಪ್ರಾತಿನಿಧ್ಯ ಸಿಕ್ಕಿಲ್ಲ. ಒಟ್ಟು 34 ಸಂಖ್ಯಾಬಲದ ಮಂತ್ರಿಮಂಡಲದಲ್ಲಿ ನಡೆದ ಸಚಿವ ಸಂಪುಟ ವಿಸ್ತರಣೆಯಿಂದ 33 ಸ್ಥಾನ ಭರ್ತಿಯಾದಂತಾಗಿದೆ. ಆದರೆ ರಾಜ್ಯದ ಹೆಚ್ಚಿನ ಜಿಲ್ಲೆಗಳಿಗೆ ಸಚಿವ ಭಾಗ್ಯ ದೊರೆತಿಲ್ಲ. 28 ವಿಧಾನಸಭಾ ಕ್ಷೇತ್ರಗಳನ್ನು ಹೊಂದಿರುವ ಬೆಂಗಳೂರು ಮಹಾನಗರಕ್ಕೆ 7 ಸಚಿವ ಸ್ಥಾನ (ಸುರೇಶ್ ಕುಮಾರ್, ಆರ್.ಅಶೋಕ, ಅಶ್ವತ್ಥ ನಾರಾಯಣ, ವಿ.ಸೋಮಣ್ಣ, ಅರವಿಂದ ಲಿಂಬಾವಳಿ, ಬೈರತಿ ಬಸವರಾಜ್, ಎಸ್.ಟಿ.ಸೋಮಶೇಖರ್) 18 ವಿಧಾನಸಭಾ ಕ್ಷೇತ್ರ ಹೊಂದಿರುವ ಬೆಳಗಾವಿ ಜಿಲ್ಲೆಗೆ 5 ಸಚಿವ ಸ್ಥಾನ (ಲಕ್ಷ್ಮಣ ಸವದಿ, ರಮೇಶ್ ಜಾರಕಿಹೊಳಿ, ಶಶಿಕಲಾ ಜೊಲ್ಲೆ, ಶ್ರೀಮಂತ ಪಾಟೀಲ್, ಉಮೇಶ್ ಕತ್ತಿ ) ದೊರೆತಂತಾಗಿವೆ. ಚಿಕ್ಕ ಜಿಲ್ಲೆಗಳಲ್ಲಿ ಒಂದಾದ ಹಾವೇರಿ ಜಿಲ್ಲೆಗೆ 3 ಸಚಿವ ಸ್ಥಾನ (ಬಸವರಾಜ ಬೊಮ್ಮಾಯಿ, ಬಿ.ಸಿ.ಪಾಟೀಲ್, ಆರ್.ಶಂಕರ್) ಲಭಿಸಿದೆ. ಬಳ್ಳಾರಿ ಜಿಲ್ಲೆಗೆ ಸಂಪುಟದಲ್ಲಿ ಯಾವುದೇ ಪ್ರಾತಿನಿಧ್ಯ ದೊರೆತಿಲ್ಲ. ಸಮಾಜ ಕಲ್ಯಾಣ ಸಚಿವ ಶ್ರೀರಾಮುಲು ಮೂಲತಃ ಬಳ್ಳಾರಿ ಜಿಲ್ಲೆಯವರಾದರೂ ಅವರು ಪ್ರತಿನಿಧಿಸುವ ಮೊಳಕಾಲ್ಮೂರು ವಿಧಾನಸಭೆ ಕ್ಷೇತ್ರ ಚಿತ್ರದುರ್ಗ ಜಿಲ್ಲೆಗೆ ಸೇರಿದ್ದರಿಂದ ಬಳ್ಳಾರಿ ಜಿಲ್ಲೆ ಸಚಿವ ಸ್ಥಾನದಿಂದ ವಂಚಿತಗೊಂಡಿದೆ.

**ಪ್ರಾತಿನಿಧ್ಯ ಇಲ್ಲದ ಜಿಲ್ಲೆಗಳು:** ಮೈಸೂರು, ಚಾಮರಾಜನಗರ, ಕೊಡಗು, ಕೋಲಾರ, ಬಳ್ಳಾರಿ, ದಾವಣಗೆರೆ, ಚಿಕ್ಕಮಗಳೂರು, ಯಾದಗಿರಿ, ಕಲಬುರಗಿ, ರಾಯಚೂರು, ವಿಜಯಪುರ, ಕೊಪ್ಪಳ.

## ಮಾಯಾನಗರಿ ದುಬೈಗಿಂತ ದೊಡ್ಡ ಸಾಧನೆ ಬೇಕಾ?

ನೂರೆಂಟು ವಿಶ್ವ
ವಿಶ್ವೇಶ್ವರ ಭಟ್



## ಭೋಳೆ ಭವಾನಿರಾಯನ ಭಾಷಣ ವೈಖರಿ



ಪ್ರಾಣೇಶ್ ಪ್ರಪಂಚ
ಗಂಗಾವತಿ ಪ್ರಾಣೇಶ

### ದಾರಿದೀಪೋಕ್ತಿ

ಬರೆದಿದ್ದನ್ನು ಅಳಿಸಬಹುದು. ಆದರೆ ಆಡಿದ ಮಾತನ್ನು ಅಳಿಸಿ ಹಾಕಲು ಆಗುವುದಿಲ್ಲ. ಆದ್ದರಿಂದ ಮಾತನ್ನು ಆಡುವಾಗ ಎಚ್ಚರವಿರಲಿ. ಅದರಲ್ಲೂ ಸಿಟ್ಟು ಬಂದಾಗ ಮಾತಾಡಲೇ ಬಾರದು. ಏನು ಮಾತಾಡುತ್ತೇವೆಂಬುದೇ ಗೊತ್ತಿರುವುದಿಲ್ಲ.

### ವಕ್ರತುಂಡೋಕ್ತಿ

ಹೆಂಡತಿ 'ಏನು?' ಅಂತ ಜೋರಾಗಿ ಕೇಳಿದರೆ, ಅವಳಿಗೆ ಕೇಳಿಲ್ಲ ಎಂದಲ್ಲ, ನೀವು ಹೇಳಿದ್ದನ್ನು ಬದಲಿಸಿಕೊಳ್ಳಲು ಅವಳು ಮತ್ತೊಂದು ಅವಕಾಶ ಕೊಡುತ್ತಿದ್ದಾಳೆ ಎಂದರ್ಥ.

### ಮಾತಂದ್ರೆ ಮಾತು



ಕಾಂಗ್ರೆಸ್ ಪಕ್ಷವು ದೇಶಪ್ರೇಮಿಗಳನ್ನು ಸದಾ ದೂಷಿಸಿದೆ.
-**ಪ್ರಜ್ಞಾ ಠಾಕೂರ್** ಬಿಜೆಪಿ ಸಂಸದೆ

### ಅರಿವೇ ಗುರು



ಸೊಳ್ಳೆಗಳೇ ಇಲ್ಲದಿರುವ ಜಗತ್ತಿನ ದೊಡ್ಡ ದೇಶ ಐಸ್‌ಲ್ಯಾಂಡ್. ಅತಿಶೀತ ವಾತಾವರಣ ಇದಕ್ಕೆ ಕಾರಣವಂತೆ. ನ್ಯೂ ಕ್ಯಾಲೆಡೋನಿಯಾ, ಫ್ರೆಂಚ್ ಪಾಲಿನೇಷಿಯಾ ಹಾಗೂ ಸಿಷೆಲ್ಸ್‌ನಲ್ಲೂ ಸೊಳ್ಳೆಗಳಿಲ್ಲವಂತೆ.

## ಭಾರತೀಯ ವಾಯುಸೇನೆಗೆ ಇನ್ನಷ್ಟು ತೇಜಸ್ಸು

ಎಚ್‌ಎಎಲ್ ಅಭಿವೃದ್ಧಿಪಡಿಸಿರುವ ತೇಜಸ್ ಲಘು ಯುದ್ಧ ವಿಮಾನಗಳ ಖರೀದಿಸಲು ಪ್ರಧಾನಿ ನರೇಂದ್ರ ಮೋದಿ ನೇತೃತ್ವದಲ್ಲಿ ನಡೆದ ರಕ್ಷಣೆ ಕುರಿತ ಸಂಪುಟ ಸಮಿತಿ(ಸಿಸಿಎಸ್) ಸಭೆಯಲ್ಲಿ ಅನುಮೋದನೆ ನೀಡಲಾಗಿದೆ.



ವೆಚ್ಚ ₹ 48,000 ಕೋಟಿ

ಒಟ್ಟು ಖರೀದಿ 83

ತಂತ್ರಜ್ಞಾನ: ನಾಲ್ಕನೇ ತಲೆಮಾರಿನ ಯುದ್ಧ ವಿಮಾನ

ತಯಾರಕರು: ಹಿಂದೂಸ್ತಾನ್ ಏರೋನಾಟಿಕ್ಸ್ ಲಿಮಿಟೆಡ್ (ಎಚ್‌ಎಎಲ್)

ಹೇಗೆ ಬಳಕೆ: 73 ಯುದ್ಧ ವಿಮಾನ, 10 ತರಬೇತಿ ವಿಮಾನ

## ಸಂಚಾರ ದಟ್ಟಣೆ: ಅಗ್ರ ಹತ್ತು ನಗರಗಳ ಪಟ್ಟಿಯಲ್ಲಿ ಬೆಂಗಳೂರು

### ಟಾಮ್‌ಟಾಮ್ ಸಂಚಾರ ಸೂಚ್ಯಂಕ ಸಮೀಕ್ಷೆಯ ವರದಿ ಬಿಡುಗಡೆ

**ದೆಹಲಿ:** ಕರೋನಾ ಲಾಕ್‌ಡೌನ್ ನಂತರ ದೇಶಾದ್ಯಂತ ಹೆಚ್ಚಿದ ವಾಹನ ಸಂಚಾರ ದಟ್ಟಣೆಯು ಆರ್ಥಿಕ ಪುನಶ್ಚೇತನದ ಸೂಚಕವಾಗಿದೆ ಎಂದು ಸಮೀಕ್ಷೆಯೊಂದು ಬಿಡುಗಡೆ ಮಾಡಿರುವ ವರದಿಯಲ್ಲಿ ತಿಳಿಸಿದೆ.

- ಇದು ದೇಶದ ಆರ್ಥಿಕ ಪುನಶ್ಚೇತನದ ಸೂಚಕವೆಂದ ಸಮೀಕ್ಷೆ

ಟಾಮ್‌ಟಾಮ್ ಸಂಚಾರ ಸೂಚ್ಯಂಕ ಬಿಡುಗಡೆ ಮಾಡಿರುವ ವರದಿಯ ಪ್ರಕಾರ 2020ರಲ್ಲಿ ಮುಂಬೈ, ದೆಹಲಿ ಮತ್ತು ಬೆಂಗಳೂರು ಸಂಚಾರ ದಟ್ಟಣೆ ಹೆಚ್ಚಿರುವ ವಿಶ್ವದ ಅಗ್ರ 10 ನಗರಗಳ ಪಟ್ಟಿಯಲ್ಲಿ ಸ್ಥಾನ ಪಡೆದಿವೆ. ಸಮೀಕ್ಷೆಗೆ 57 ದೇಶಗಳ 416 ನಗರಗಳನ್ನು ಆಯ್ಕೆ ಮಾಡಿಕೊಳ್ಳಲಾಗಿತ್ತು. ಶ್ರೇಯಾಂಕದಲ್ಲಿರುವ ಭಾರತದ ನಾಲ್ಕು ನಗರಗಳಲ್ಲಿನ ಒಟ್ಟಾರೆ ದಟ್ಟಣೆ 2019ಕ್ಕಿಂತ ಕಡಿಮೆಯಿದ್ದರೂ, ಆರ್ಥಿಕ ಚಟುವಟಿಕೆಗಳ ಅನ್‌ಲಾಕ್ ಪ್ರಾರಂಭವಾದಾಗಿನಿಂದ ಕಳೆದ 5-6 ತಿಂಗಳುಗಳಲ್ಲಿ ಭಾರಿ ಚೇತರಿಕೆ ಕಂಡುಬಂದಿದೆ.

ಕೇಂದ್ರ ಸರಕಾರ ಏಪ್ರಿಲ್‌ನಲ್ಲಿ ರಾಷ್ಟ್ರವ್ಯಾಪಿ ಲಾಕ್‌ಡೌನ್ ವಿಧಿಸಿದ ತಕ್ಷಣ ಭಾರತದ ಪ್ರಮುಖ ನಗರಗಳಲ್ಲಿ ಸಂಚಾರ ದಟ್ಟಣೆಯೇ ಇರಲಿಲ್ಲ. ಲಾಕ್‌ಡೌನ್‌ನಿಂದಾಗಿ ಹಲವಾರು ದೇಶಗಳಲ್ಲಿ ವಾರ್ಷಿಕ ಸಂಚಾರ ದಟ್ಟಣೆ 10 ವರ್ಷಗಳಲ್ಲೇ ಮೊದಲ ಬಾರಿಗೆ ಭಾರಿ ಕುಸಿ ಕಂಡುಬಂದಿದೆ ಎಂದು ವರದಿ ತಿಳಿಸಿದೆ.

### ಯಾವ ನಗರದಲ್ಲಿ ಎಷ್ಟು ಕುಸಿತ?

- ಜಾಗತಿಕವಾಗಿ ಎರಡನೇ ಸ್ಥಾನದಲ್ಲಿರುವ ಮುಂಬೈನಲ್ಲಿ 2019ಕ್ಕೆ ಹೋಲಿಸಿದರೆ 2020ರಲ್ಲಿ ಶೇ.12ರಷ್ಟು ಕಡಿಮೆಯಾಗಿದೆ.
- ಬೆಂಗಳೂರು 6ನೇ ಸ್ಥಾನದಲ್ಲಿದ್ದು, ಸಂಚಾರ ದಟ್ಟಣೆ ಪ್ರಮಾಣ ಶೇ.20ರಷ್ಟು ಕಡಿಮೆಯಾಗಿದೆ.
- 2020ರಲ್ಲಿ ಶೇ.9ರಷ್ಟು ಸಂಚಾರ ದಟ್ಟಣೆ ಕುಸಿತದೊಂದಿಗೆ ದೆಹಲಿ 8ನೇ ಸ್ಥಾನದಲ್ಲಿದೆ.
- 2019ಕ್ಕೆ ಹೋಲಿಸಿದರೆ ಕಳೆದ ವರ್ಷ ಶೇ.17ರಷ್ಟು ಕುಸಿತ ಸೂಚ್ಯಂಕ ದಾಖಲೆಯಲ್ಲಿ ಪುಣೆ 16ನೇ ಸ್ಥಾನದಲ್ಲಿದೆ.

ಸಂಗ್ರಹ ಚಿತ್ರ.



### ಯಾವ ನಗರದಲ್ಲಿ ಎಷ್ಟು ಹೆಚ್ಚಳ? (ಶೇಕಡಾವಾರು)

| ತಿಂಗಳು | ಮುಂಬೈ | ಬೆಂಗಳೂರು | ದೆಹಲಿ | ಪುಣೆ |
|---|---|---|---|---|
| ಜನವರಿ | 64 | 70 | 63 | 57 |
| ಫೆಬ್ರವರಿ | 62 | 69 | 59 | 54 |
| ಮಾರ್ಚ್ | 48 | 54 | 47 | 43 |
| ಏಪ್ರಿಲ್ | 0 | 6 | 4 | 2 |
| ಮೇ | 5 | 27 | 22 | 8 |
| ಜೂನ್ | 24 | 36 | 30 | 25 |
| ಜುಲೈ | 33 | 33 | 39 | 25 |
| ಆಗಸ್ಟ್ | 45 | 35 | 46 | 33 |
| ಸೆಪ್ಟೆಂಬರ್ | 51 | 42 | 46 | 35 |
| ಅಕ್ಟೋಬರ್ | 56 | 45 | 46 | 39 |
| ನವೆಂಬರ್ | 55 | 47 | 42 | 38 |
| ಡಿಸೆಂಬರ್ | 59 | 48 | 45 | 41 |